**OS. No.45/2018**
**D.W-4**

**( ದಿನಾಂಕ.21-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟೀ ಸವಾಲುಃ** ಶ್ರೀ. B.A.D. ವಕೀಲರಿಂದ

ನಾನು ಹುಟಿದಾಗಿನಿಂದಲೂ ತೀರ್ಥ ತಾಂಡೆಯಲ್ಲಿ ಇರುತ್ತೇನೆ. 1 ನೇ ಪ್ರತಿವಾದಿ ಈಗ 5 ನೇ ಪ್ರತಿವಾದಿ ಹತ್ತಿರ ತೀರ್ಥ ತಾಂಡಾದಲ್ಲಿ ಇರುತ್ತಾರೆ. 1 ನೇ ಪ್ರತಿವಾದಿ ಆರೋಗ್ಯ ಈಗ ಸರಿಯಾಗಿದೆ. 1 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನೀಡಬಹುದು ಎಂದರೆ, ಸಾಕ್ಷಿ ಅವಳಿಗೆ ನಡೆಯಲಿಕ್ಕೆ ಬರುವುದಿಲ್ಲ ಎಂದು ನುಡಿಯುತ್ತಾರೆ. ಕಿವಿ ಕೇಳಿಸುತ್ತದೆ ಮತ್ತು ಕಣ್ಣು ಕಾಣಿಸುತ್ತದೆ ಎಂದರೆ, ಸಾಕ್ಷಿ ಅಷ್ಟೇನು ಇಲಲ ಎಂದು ನುಡಿಯುತ್ತಾರೆ. ಅಲ್ಲದೆ ಮಾತನಾಡಲು ಕೂಡಾ ಅಷ್ಟೇನು ಬರುವುದಿಲ್ಲ. 1 ನೇ ಪ್ರತಿವಾದಿಯನ್ನು ಮುಂಬೈ ಆಸ್ಪತ್ರೆಯಲ್ಲಿ 5 ನೇ ಪ್ರತಿವಾದಿ ತೋರಿಸಿರುತ್ತ್ರೆರೆ. 1 ನೇ ಪ್ರತಿವಾದಿಯ ಸಾಕ್ಷಿಯನ್ನು ತಾಂಡೆಯಲ್ಲಿ ಬಂದು ತೆಗೆದುಕೊಂಡಲ್ಲಿ ಅವಳು ಸಾಕ್ಷಿ ನುಡಿಯುತ್ತಾಳೆ. ನಾನು ನನ್ನ ಜೀವಮಾನದಲ್ಲಿ ಯಾವುದೇ ಪಂಚಾಯತಿ ಮಾಡಿಲ್ಲ. ನಾನು ನಾಮದೇವ ವಿಚಾರದಲ್ಲಿ ಪಂಚಾಯತಿ ಮಾಡಿದ್ದೇನು ಎಂದು ಹೇಳಿ ಬರೆಸಿಲ್ಲ. ನಾಮದೇವ ಸುಮಾರು 5-6 ವರ್ಷದ ಹಿಂದೆ ಸರಿ ಹೋಗಿರುತ್ತಾರೆ.

**OS. No.45/2018**
**D.W-4**

ನಾಮದೇವರಿಗೆ ಸರ್ವೇ ನಂಬರ 320 ರಲ್ಲಿ 1 ಎಕರೆ 26 ಗುಂಟೆ ಜಮೀನು ಇತ್ತು. ಸದರಿ ಜಮೀನು ನಾಮದೇವರವರು ಸ್ವಂತ ಗಳಿಸಿರುತ್ತಾರೆ. ಅದನ್ನು ಯಾರಿಂದ ಮತ್ತು ಎಷ್ಟು ಬೆಲೆಗೆ ಕೊಂಡುಕೊಂಡಿರುತ್ತಾರೆ ನಾನು ದಾಖಲೆ ನೋಡಿಲ್ಲ. ನಾಮದೇವ ಹೆಸರಿನಲ್ಲಿ ಯಾವ ರೀತಿಯಾಗಿ ಮ್ಯೂಟೇಶನ ಆಗಿದೆ ಎಂದು ನಾನು ನೋಡಿಲ್ಲ. ನಾಮದೇವರವರು ಮೇಲೆ ಹೇಳಿದ ಆಸ್ತಿಯನ್ನು ಖರೀದಿ ಮಾಡಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾಮದೇವರವರ ವಿಚಾರದಲ್ಲಿ ಯಾವುದೇ ಪಂಚಾಯತಿ ಮಾಡಿಲ್ಲವೆಂದು ನನ್ನ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲವಾದರೂ, ಮೃತ್ಯುಪತ್ರ ಬರೆದ ಬಗ್ಗೆ ನನಗೆ ಗೊತ್ತಿರುತ್ತದೆ. ಸದರಿ ಮೃತ್ಯುಪತ್ರ ಉಪ ನೋಂದಣಿ ಕಚೇರಿಯಲ್ಲಿ ನೋಂದ ಆಗಿರುತ್ತದೆ. ಸದರಿ ಮೃತ್ಯುಪತ್ರಕ್ಕೆ 5 ಜನ ಅಕ್ಕ-ತಂಗಿಯರಾದ ಪಾರುಬಾಯಿ ಗಂಡ ಬಾಬು, ಕಮಲಾಬಾಯಿ ಗಂಡ ಬಾಬು, ರಘುಬಾಯಿ ಗಂಡ ಸುಬಾಸ, ಲಲಿತಾಬಾಯಿ ಗಂಡ ಶಂಕರ ಮತ್ತು ಕೇಶುಬಾಯಿ ಗಂಡ ನಾಮದೇವ ಸಹಿ ಮಾಡಿರುತ್ತಾರೆ. ಅಲ್ಲದೇ ಇವರನ್ನು ಹೊರತುಪಡಿಸಿ ಗೇಮು ತಂದೆ ದೇವಲು ಮತ್ತು ನಾನು ಸಹಿ ಮಾಡಿರುತ್ತೇವೆ. ಸದರಿ ನಾನು ಮತ್ತು ಮೇಲೆ ಹೇಳಿದವರೆಲ್ಲಾರ ಸಹಿ ಮಾಡಿದ ದಾಖಲೆ ಬಿಳಿ ಹಾಳೆಯ ಮೇಲ್ಲಿತು. ಇವತ್ತಿಗೂ ನಾನು ಸದರಿ ದಾಖಲೆ ನಾನು ನೋಡಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಮೃತ್ಯುಪತ್ರವನ್ನು ನೋಂದಾವಣಿ ಕಾಲಕ್ಕೆ ನೋಡಿರುತ್ತೇನೆ.

ಸುಮಾರು ಒಂದು ವರ್ಷದ ಹಿಂದೆ ಸದರಿ ಮೃತ್ಯುಪತ್ರವನ್ನು ನಾನು ನೋಡಿರುತ್ತೇನೆ. ಸದರಿ ಮೃತ್ಯುಪತ್ರದ ಜೆರಾಕ್ಸ ಪ್ರತಿ ನನ್ನ ಹತ್ತಿರ ಇರುತ್ತದೆ. ಸದರಿ ಜೆರಾಕ್ಸ ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಸದರಿ ಜೆರಾಕ್ಸ ಪ್ರತಿ ನನ್ನ ಹತ್ತಿರ ಇರುತ್ತದೆಂದು ನನ್ನ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ನನ್ನ ಹತ್ತಿರ ಇರುವ ಜೆರಾಕ್ಸ ದಾಖಲೆಯನ್ನು ನ್ಯಾಯಾಲಯ ಆದೇಶ ಮಾಡಿದ್ದಲ್ಲಿ ನಾನು ಹಾಜರುಪಡಿಸುತ್ತೇನೆ. ಮೂಲ ಮೃತ್ಯುಪತ್ರ ಏನಾಯಿತು ಎಂದು ನಾನು ನೋಡಿಲ್ಲ.

5 ನೇ ಪ್ರತಿವಾದಿ ಹೆಸರಿನಲ್ಲಿ ಮ್ಯೂಟೇಶನ ಹೇಗಾಗಿದೆ ಎಂದು ನನಗೆ ಗೊತ್ತಿದೆ. ಸದರಿ ಮ್ಯೂಟೇಶನ ಮಾಡಲು ನಾಮದೇವ ಅರ್ಜಿ ಕೊಟ್ಟಿರುತ್ತಾರೆ. ಸದರಿ ಅರ್ಜಿ ಕೊಟ್ಟು ಸುಮಾರು 25 ವರ್ಷ ಮೇಲೆ ಆಗಿರುತ್ತದೆ. ಸದರಿ ಮ್ಯೂಟೇಶನ ಆಗುವ ಕಾಲಕ್ಕೆ ಪಹಣಿ ಕೊಟ್ಟು ಮ್ಯೂಟೇಶನ ಮಾಡಿಸಿರುತ್ತಾರೆ. ಸದರಿ ಅರ್ಜಿಯ ಮೇಲೆ ನಾನು ಸಾಕ್ಷಿದಾರರು ಅಂತ ಸಹಿ ಮಾಡಿಲ್ಲ. ಸದರಿ ಅರ್ಜಿಯಲ್ಲಿ ಏನು ಬರೆದಿದೆ ಎಂದು ನನಗೆ ನೆನಪು ಮಾಡಿಕೊಂಡು ಹೇಳಲು ಆಗುವುದಿಲ್ಲ. ನಾನು ಮ್ಯೂಟೇಶನ ಆದ ಬಗ್ಗೆ ಹೇಳಿದ್ದು, ಅದು ಯಾವ ಆಧಾರದ ಮೇಲೆ ಆಗಿರುತ್ತದೆಂದು ನನಗೆ ಗೊತ್ತಿಲ್ಲ. ನಾನು ಸಾಕ್ಷಿ ನೀಡುವ ಮುಂಚೆ ಮೇಲೆ ಹೇಳಿದ ಮ್ಯೂಟೇಶನ ಯಾವ ಆಧಾರದ ಮೇಲೆ ಆಯಿತು ಎಂದು ಚೌಕಾಸಿ ಮಾಡಿಲ್ಲ.

**D.W-4**

ಸುಮಾರು 5-6 ವರ್ಷದ ಹಿಂದೆ ನಾಮದೇವ ತೀರಿಕೊಂಡಿರುತ್ತಾರೆ. ನಾಮದೇವ ಇರುವರೆಗೂ ದಾವಾ ಸ್ವತ್ತು ಆತನ ಕಬ್ಜಾದಲ್ಲಿ ಇತ್ತು ಎಂದರೆ, ಸಾಕ್ಷಿ 5 ನೇ ಪ್ರತಿವಾದಿ ಮತ್ತು ನಾಮದೇವರವರ ಜಂಟೀ ಕಬ್ಜಾದಲ್ಲಿ ಇತ್ತು ಎಂದು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ನಾನು 5 ನೇ ಪ್ರತಿವಾದಿ ಒಬ್ಬಳೇ ದಾವಾ ಸ್ವತ್ತಿನ ಕಬ್ಜಾದಲ್ಲಿ ಇರುತ್ತಾಳೆಂದು ಹೇಳಿ ಬರೆಸಿರುತ್ತೇನೆ. ನಾಮದೇವ ಇರುವರೆಗೂ ದಾವಾ ಸ್ವತ್ತು ನಾಮದೇವ ಕಬ್ಜಾದಲ್ಲಿ ಇತ್ತು ಎಂದರೆ ಸರಿಯಲ್ಲ. ನಾಮದೇವ ತೀರಿಕೊಂಡ ನಂತರ ಆತನ ಹೆಸರಿನಲ್ಲಿರುವ ಎಲ್ಲಾ ಸ್ವತ್ತುಗಳು ಆತನ ಕುಟುಂಬದ ಎಲ್ಲಾ ಸದಸ್ಯರ ಜಂಟೀ ಕಬ್ಜೆಯಲ್ಲಿ ಇದೆ ಎಂದರೆ ಸರಿಯಲ್ಲ.

ನಾಮದೇವ ತಾನು ಇರುವ ಮನೆ ಜಾಗವನ್ನು ಕ್ರಯಕ್ಕೆ ಪಡೆದಿರುತ್ತಾರೆ. ನಾಮದೇವ ತಾನು ಇರುವ ಮನೆಯನ್ನು ದತ್ತಾ ಬಗಾಡೆರವರಿಂದ ಸುಮಾರು 400-500 ರೂಪಾಯಿಗೆ ಕ್ರಯಕ್ಕೆ ಪಡೆದಿರುತ್ತಾನೆ. ಆ ಬಗ್ಗೆ ನಾನು ದಾಖಲೆ ನೋಡಿಲ್ಲ. ನಾಮದೇವ ಹೆಸರಿನಲ್ಲಿ ಆತ ಇರುವ ಮನೆ ಪಂಚಾಯತಿಯಲ್ಲಿ ಹೇಗೆ ಆಯಿತು ಎಂದು ನಾನು ನೋಡಿಲ್ಲ. ನಾಮದೇವ ತನ್ನ ಹೆಸರಿನಲ್ಲಿರುವ ಖಾಲಿ ಜಾಗದಲ್ಲಿ ಯಾವಾಗ ಕಟ್ಟಡ ಮಾಡಿರುತ್ತಾರೆಂದು ಕೇಳಿದ ಪ್ರಶ್ನೆಗೆ, ಸಾಕ್ಷಿ ಖಾಲಿ ಜಾಗವಿದೆ ಹಾಗೂ ಯಾವುದೇ ಕಟ್ಟಡ ಮಾಡಿಲ್ಲ ಎಂದು ನುಡಿಯುತ್ತಾರೆ. ತದನಂತರ 5 ನೇ ಪ್ರತಿವಾದಿ ಮನೆ ಕಟ್ಟಿರುತ್ತಾಳೆ. ಸುಮಾರು 20 ವರ್ಷದ ಹಿಂದೆ 5 ನೇ ಪ್ರತಿವಾದಿ ಮನೆ ಕಟ್ಟಿಸಿರುತ್ತಾಳೆ.

5 ನೇ ಪ್ರತಿವಾದಿ ಕಟ್ಟಡ ಮಾಡುವ ಪೂರ್ವದಲ್ಲಿ ಕೊರಳ್ಳಿ ಪಂಚಾಯತಿಯಿಂದ ಪರವಾನಗಿಯನ್ನು ಪಡೆದಿರುತ್ತಾಳೆ. 5 ನೇ ಪ್ರತಿವಾದಿ ಕಟ್ಟಡ ಮಾಡಿದ ಬಗ್ಗೆ ಲೆಕ್ಕಪತ್ರ ನಾನು ಇಟ್ಟಿಲ್ಲ. 5 ನೇ ಪ್ರತಿವಾದಿ ತಾನು ಮನೆ ಕಟ್ಟಡ ಮಾಡಲು ಖರ್ಚು ಮಾಡಿದ ಬಗ್ಗೆ ನನ್ನ ಮುಂದೆ ಹೇಳಿಲ್ಲ. 5 ನೇ ಪ್ರತಿವಾದಿ ಕಟ್ಟಡ ಮಾಡಲು ಎಷ್ಟು ಖರ್ಚು ಮಾಡಿರುತ್ತಾಳೆಂದು ನನ್ನ ಮುಂದೆ ಹೇಳಿಲ್ಲ.

5 ನೇ ಪ್ರತಿವಾದಿ ಪಂಚಾಯತಿಯಿಂದ ಪರವಾನಗಿ ಪಡೆದು ಕಟ್ಟಡ ಮಾಡಿರುತ್ತಾಳೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿ ನಾಮದೇವರವರಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಪಡಿಸಿದ ಬಗ್ಗೆ ನಾನು ದಾಖಲೆಯನ್ನು ನೋಡಿರುತ್ತೇನೆ. ಸದರಿ ನಾಮದೇವರವರಿಗೆ ಚಿಕಿತ್ಸೆ ಕೊಡಿಸಿದ್ದು, ಅವರು ತೀರಿಕೊಳ್ಳುವ ಸುಮಾರು 3 ವರ್ಷದ ಮುಂಚೆ ಇರುತ್ತದೆ. ನಾನು ನೋಡಿದ ದಾಖಲೆ ಯಾವ ಆಸ್ಪತ್ರೆದಾಗಿತ್ತು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ನಾನು ನೋಡಿದ ಆಸ್ಪತ್ರೆ ದಾಖಲೆ ಎಷ್ಟು ಇದ್ದವು ಎಂದರೆ ನನಗೆ ಗೊತ್ತಿಲ್ಲ. 5 ನೇ ಪ್ರತಿವಾದಿ ನಾಮದೇವರವರಿಗೆ ಆಸ್ಪತ್ರೆ ಸಲುವಾಗಿ ಎರಡು ಲಕ್ಷ ಖರ್ಚು ಮಾಡಿರುತ್ತೇನೆಂದು ನನ್ನ ಮುಂದೆ ಹೇಳಿರುತ್ತಾಳೆ. ಆದರೆ ಯಾವ ಯಾವ ದಿನಾಂಕಕ್ಕೆ ಎಷ್ಟೇಷ್ಟು ಖರ್ಚು ಮಾಡಿರುತ್ತಾಳೆಂದು ನನ್ನ ಮುಂದೆ ಹೇಳಿಲ್ಲ.

ಸದರಿ ಆಸ್ಪತ್ರೆಗೆ ಖರ್ಚು ಮಾಡಿದ ವಿಷಯವನ್ನು ನಾನು ಸಾಕ್ಷಿ ನೀಡುವಕ್ಕಿಂತ ಮುಂಚೆ 2-3 ದಿನ ಮೊದಲು ಹೇಳಿರುತ್ತಾರೆಂದರೆ, ಸಾಕ್ಷಿ ನಾಮದೇವ ಸಾಯುವಕ್ಕಿಂತ ಮುಂಚೆ 2-3 ತಿಂಗಳು ಮೊದಲು ನನಗೆ ಹೇಳಿರುತ್ತಾಳೆ ಎಂದು ನುಡಿಯುತ್ತಾರೆ. ಸದರಿ ವಿಷಯವನ್ನು ನನಗೆ ತಾಂಡಾದಲ್ಲಿ ಹೇಳಿರುತ್ತಾರೆ. ನನಗೆ ಹೇಳುವ ಕಾಲಕ್ಕೆ ಬಾಬು, ರಾಮಚಂದ್ರ, ಪಂಡಿತ, ಗೇಮು ಹಾಜರಿದ್ದರು.

ನಾಮದೇವ 5 ನೇ ಪ್ರತಿವಾದಿಗೆ ಜೀವನಾಂಶದ ಸಲುವಾಗಿ ಜಾಗ ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮನೆ ಅಳಿಯತನ ಎಂದು ಇಟ್ಟುಕೊಂಡಿದ್ದರು ಎಂದು ನುಡಿಯುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಜೀವನಾಂಶದ ಸಲುವಾಗಿ ನಾಮದೇವ ಮನೆಯನ್ನು 5 ನೇ ಪ್ರತಿವಾದಿಗೆ ಕೊಟ್ಟಿರುತ್ತಾನೆಂದು ನಾನು ಹೇಳಿ ಬರೆಸಿಲ್ಲ. ಅದೇ ರೀತಿ ನನ್ನ ಪ್ರಮಾಣ ಪತ್ರದಲ್ಲಿ 5 ನೇ ಪ್ರತಿವಾದಿ ಗಂಡನನ್ನು ಮನೆ ಅಳಿಯನನ್ನಾಗಿ ಇಟ್ಟುಕೊಂಡಿದ್ದನು ಎಂದು ಕೂಡಾ ಹೇಳಿ ಬರೆಸಿಲ್ಲ.

4 ನೇ ಪ್ರತಿವಾದಿ, 5 ನೇ ಪ್ರತಿವಾದಿ ಅಕ್ಕ ಇರುತ್ತಾಳೆ. 4 ನೇ ಪ್ರತಿವಾದಿ ಆರೋಗ್ಯವಿದ್ದಾಳೆ ಮತ್ತು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುವ ಸಾಮರ್ಥ ಹೊಂದಿದ್ದಾಳೆಂದರೆ ಸರಿ. 1 ಮತ್ತು 4 ನೇ ಪ್ರತಿವಾದಿರವರು ಒಬ್ಬ ಲಕ್ಮಣ ಸಂಗಾರವರಿಂದ ಸುಮಾರು 30 ವರ್ಷದ ಹಿಂದೆ ಒಂದು ಜಮೀನನ್ನು ಕೊಂಡುಕೊಂಡಿದ್ದರು. ಸದರಿ ಜಮೀನಿನ ನೋಂದಣಿ ಕಾಲಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿಲ್ಲ.

ಸದರಿ ಜಮೀನಿನ ಕ್ರಯ ಪತ್ರಕ್ಕೆ ಯಾರು ಸಾಕ್ಷಿದಾರರು ಇದ್ದಾರೆಂದು ನನಗೆ ಗೊತ್ತಿಲ್ಲ. ಸದರಿ ಜಮೀನಿನ ಕ್ರಯಪತ್ರವನ್ನು ನಾನು ನೋಡಿಲ್ಲ. 1 ಮತ್ತು 4 ನೇ ಪ್ರತಿವಾದಿ ಜಮೀನು ಕೊಂಡುಕೊಂಡ ನಂತರ ಸುಮಾರು 4 ವರ್ಷಕ್ಕೆ ವಿಭಾಗ ಮಾಡಿಕೊಂಡಿರುತ್ತಾರೆ. ಸದರಿರವರ ನಡುವೆ ಆದ ಹಂಚಿಕೆಯಲ್ಲಿ ನನ್ನ ಸಮಕ್ಷಮ ಯಾವುದೇ ಕಾಗದ ಪತ್ರವಾಗಿಲ್ಲ. 1 ನೇ ಪ್ರತಿವಾದಿ 4 ನೇ ಪ್ರತಿವಾದಿ ಜೊತೆ ಜಂಟೀಯಾಗಿ ಖರೀದಿ ಹಿಡಿದ ಸ್ವತ್ತಿನ ಇವತ್ತಿನವರೆಗೂ ಮಾಲೀಕಳು ಮತ್ತು ಕಬ್ಜಾದಾರಳು ಇದ್ದಾಳೆಂದರೆ ಸರಿ. 1 ಮತ್ತು 4 ನೇ ಪ್ರತಿವಾದಿಯರು ಖರೀದಿಸಿದ ಸ್ವತ್ತನ್ನು ನಾಮದೇವರವರು ಅವರ ಹೆಸರಿನಲ್ಲಿ ಖರೀದಿಸಿದ್ದರು ಎಂದರೆ ಸರಿ. ಸದರಿ ಆಸ್ತಿ ಏಕತ್ರ ಕುಟುಂಬದ ಆಸ್ತಿ ಎಂದರೆ ಸರಿ.

ನಾಮದೇವರವವರಿಗೆ ಹೆಣ್ಣು ಮಕ್ಕಳು ಮಾತ್ರ ಇದ್ದು, ಗಂಡು ಮಕ್ಕಳು ಇರಲಿಲ್ಲ. ನಾಮದೇವರವರಿಗೆ 2 ರಿಂದ 6 ನೇ ಪ್ರತಿವಾದಿಗಳು ಹೆಣ್ಣು ಮಕ್ಕಳು ಇದ್ದರು ಎಂದರೆ ಸರಿ. 1 ಮತ್ತು 6 ನೇ ಪ್ರತಿವಾದಿಯರ ನಡುವೆ ಸುಮಾರರು 6 ತಿಂಗಳ ಹಿಂದೆ ವಿವಾದ ಉಂಟಾದಾಗ ನಾನು ಬಗೆಹರಿಸಿರುತ್ತೇನೆ ಎಂದರೆ ಸರಿ. ಆ ಸಮಯದಲ್ಲಿ ನನ್ನ ಜೊತೆ ವಿಜು ಜಾಧವ, ಗಂಗಾರಾಮ ಪಾಂಡು ಫವಾರ, ಚಿರು ಚವಾಣ, ಪಂಡೀತ ತಂದೆ ವಿಠಲ, ಬಾಬು ತಂದೆ ಗೇಮು, ರವಿ ತಂದೆ ಬಾಬುರವರು ಹಾಜರಿದ್ದೇವು. ಸದರಿ ಪಂಚಾಯತಿಯಲ್ಲಿ ಪ್ರತಿವಾದಿ 1,4,5 ಮತ್ತು 6 ರವರು ಹಾಜರಿದ್ದರು.

ಸದರಿ ಪಂಚಾಯತಿ ಏಕತ್ರ ಕುಟುಂಬದ ಆಸ್ತಿ ಸಲುವಾಗಿಯೇ ವಿವಾದ ಉಂಟಾಗಿತ್ತು ಎಂದರೆ ಸರಿ. ಸದರಿ ಪಂಚಾಯತಿಲ್ಲಿ ನಾವು ಕೊಟ್ಟ ತೀರ್ಮಾಣ ಬಾಯಲ್ಲಿ ಹೇಳಿರುತೆತೇವೆ. ಬರವಣಿಗೆ ಆಗಿಲ್ಲ. ಸದರಿ ಪಂಚಾಯತಿಯಾದಾಗ ಈ ದಾವೆ ಚಾಲ್ತಿಯಲ್ಲಿತ್ತು ಎಂದರೆ ಸರಿ. ಸದರಿ ಪಂಚಾಯತಿಯಲ್ಲಿ 6 ನೇ ಪ್ರತಿವಾದಿ ನನಗೂ ಕುಡಾ ಭಾಗ ಕೊಡಿ ಎಂದು ಹೇಳಿದ್ದಳು, ಆಗ ನಾವು ತಂದೆ-ತಾಯಿ ಬಾಯಿಮಾತಿದೆ ನಿಮಗೆ ಏನು ಸಿಗಲ್ಲ, ಒಬ್ಬರಿಗೆ ಮಾಡಿ ಇಟ್ಟಿದೆ ಎಂದು ಹೇಳಿ ಕಳುಹಿಸಿರುತ್ತೇವೆ.

ಆ ಸಮಯದಲ್ಲಿ ನಾವು 6 ನೇ ಪ್ರತಿವಾದಿಗೆ 1 ನೇ ಪ್ರತಿವಾದಿ ಮಾಡಿಕೊಟ್ಟ ಮೃತ್ಯುಪತ್ರದ ಬಗ್ಗೆ ಕೇಳಿರುತ್ತೇವೆ ಹಾಗೂ ಅವಳು ಒಪ್ಪಿಕೊಂಡಿರುತ್ತಾಳೆ ಎಂದರೆ ಸರಿ. ಸದರಿ ಸಮಯದಲ್ಲಿ 6 ನೇ ಪ್ರತಿವಾದಿಯಿಂದ ಮೃತ್ಯುಪತ್ರವನ್ನು ತರಿಸಿಕೊಂಡು ರದ್ದು ಮಾಡಿರುತ್ತೇವೆ. ತದನಂತರ ಸದರಿ ರದ್ದು ಮಾಡಿದ ಮೃತ್ಯುಪತ್ರವನ್ನು 4 ನೇ ಪ್ರತಿವಾದಿ ಗಂಡ ಬಾಬು ಕೈಯಲ್ಲಿ ಕೊಟ್ಟಿರುತ್ತೇವೆ. ಸದರಿ ಮೃತ್ಯುಪತ್ರವನ್ನು ತಾಂಡಾದಲ್ಲಿ ರದ್ದುಮಾಡಿರುತ್ತೇವೆ. ಉಪ ನೊಂದಣಿ ಕಚೇರಿಯಲ್ಲಿ ರದ್ದು ಮಾಡಿಲ್ಲ. ಸದರಿ ರದ್ದು ಮಾಡಿದ ಮೃತ್ಯುಪತ್ರದಲ್ಲಿ 1 ನೇ ಪ್ರತಿವಾದಿ ಏನು ಬರೆದಿದ್ದಳು ಎಂದರೆ ನನಗೆ ಗೊತ್ತಿಲ್ಲ. ಸದರಿ ಮೃತ್ಯುಪತ್ರಕ್ಕೆ ಸಾಕ್ಷಿದಾರರಾಗಿ ಯಾರು ಹಾಕಿದ್ದಿಲ್ಲ. 1 ನೇ ಪ್ರತಿವಾದಿ ಹೆಬ್ಬೆಟ್ಟಿನ ಗುರುತು ಮತ್ತು 6 ನೇ ಪ್ರತಿವಾದಿಯ ಸಹಿ ಮಾತ್ರ ಅದರ ಮೇಲಿತ್ತು. ಸದರಿ ಮೃತ್ಯುಪತ್ರ ಛಾಪಾ ಕಾಗದದ ಮೇಲೆ ಇರಲಿಲ್ಲ. ಬಿಳಿ ಹಾಳೆಯ ಮೇಲಿತ್ತು ಹಾಗೂ ನೋಂದಣಿ ಆಗಿರಲಿಲ್ಲ.

ನಾನು ಪಂಚಾಯತಿಯಲ್ಲಿ ಸದರಿ ಮೃತ್ಯುಪತ್ರವನ್ನು 1 ನೇ ಪ್ರತಿವಾದಿಯನ್ನು ಕುರಿತು ಏಕೆ ಬರೆದುಕೊಟ್ಟಿದ್ದಿ ಎಂದು ಕೇಳಿದ್ದು, ಅವಳು ನನಗೆ ತಿಳಿದಿಲ್ಲ, 6 ನೇ ಪ್ರತಿವಾದಿ ತಯಾರು ಮಾಡಿರುತ್ತಾಳೆಂದು ಹೇಳಿರುತ್ತಾಳೆ. ತದನಂತರ 6 ನೇ ಪ್ರತಿವಾದಿ ಕೇಳಲಾಗಿ ಅವಳು ನನಗೆ ಪಾಲು ಇದೆ, ಆ ಕಾರಣ ಬರೆದುಕೊಂಡಿದ್ದೇನೆ ಎಂದು ನುಡಿಯುತ್ತಾಳೆ. ಸದರಿ ಪಂಚಾಯತಿಗೆ ವಾದಿಯನ್ನು ನಾವು ಕರೆದಿದ್ದೇವು, ಆದರೆ ಅವಳು ಬಂದಿರಲಿಲ್ಲ. ವಾದಿ ಬಂದಿದ್ದರೆ ಅವಳಿಗೆ ನಾವು ಏನಾದರೂ ಕೊಟ್ಟು ಕಳುಹಿಸುತ್ತಿದ್ಕೇವು ಎಂದರೆ ಸರಿಯಲ್ಲ, ಆದರೆ ಅವಳಿಗೂ ಕೂಡಾ ನಿನಗೇನು ಬರುವುದಿಲ್ಲವೆಂದು ಹೇಳಿ ಕಳುಹಿಸುತ್ತೇವು. ನಾವು ಕರೆದ ಪಂಚಾಯತಿಗೆ ವಾದಿ ಬರದೇ ಇರುವ ಕಾರಣ ನ್ಯಾಯಾಲಯಕ್ಕೆ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿ ಹೇಳಿಕೆ ಮೇರೇಗೆ ನಾನು ನ್ಯಾಯಾಲಯದಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**